# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1917 |
| ಸದಸ್ಯರ ಹೆಸರು: | ಡಾ:ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 16.03.2022 |
| ಉತ್ತರಿಸುವ ಸಚಿವರು: | ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಈ ಕಾರ್ಯಕ್ರಮ ಯಾವಾಗ ಪ್ರಾರಂಭವಾಯಿತು; ಈ ಕಾರ್ಯಕ್ರಮದ ಉದ್ದೇಶವೇನು; | ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮವು ದಿನಾಂಕ:18-01-2021ರ ಸುತ್ತೋಲೆಯನ್ವಯ ಪ್ರತಿ ಮಾಹೆಯ 3ನೇ ಶನಿವಾರರಂದು ಜರುಗಿಸಲು ನಿರ್ಧರಿಸಲಾಗಿದ್ದು, ಈ ಕೆಳಕಂಡ ಉದ್ದೇಶಗಳನ್ನು ಒಳಗೊಂಡು ದಿನಾಂಕ:20-02-2021 ರಂದು ಪ್ರಥಮವಾಗಿ ಪ್ರಾರಂಭವಾಗಿರುತ್ತದೆ.<br>1. ಭೇಟಿ ನೀಡುವ ಗ್ರಾಮದಲ್ಲಿನ ಪಹಣಿಯ ಲೋಪ ದೋಷಗಳು, ಪಹಣಿ ಕಲಂ-3 ಮತ್ತು ಆಕಾರ್ ಬಂದ್ ತಾಳೆ ಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>2. ಪೌತಿ ಹೊಂದಿದ ಖಾತೆದಾರರ ಹೆಸರನ್ನು ಪಹಣಿಯ ಕಲಂ-9 ರಿಂದ ತೆಗೆದು ಹಾಕಿ, ನೈಜ ವಾರಸುದಾರರ ಹೆಸರನ್ನು ನಮೂದಿಸುವುದು.<br>3. ಎಲ್ಲಾ ಅರ್ಹ ವ್ಯಕ್ತಿಗಳಿಗೆ ಪಿಂಚಣಿ ಸೌಲಭ್ಯ ದೊರೆಯುತ್ತಿರುವ ಬಗ್ಗೆ ಪರಿಶೀಲಿಸುವುದು.<br>4. ಸ್ಮಶಾನ ಲಭ್ಯತೆ ಬಗ್ಗೆ ಪರಿಶೀಲಿಸುವುದು.<br>5. ಆಶ್ರಯ ಯೋಜನೆಗೆ ಲಭ್ಯ ಜಮೀನಿನ ಕಾಯ್ದಿರಿಸಲು ಕ್ರಮವಹಿಸುವುದು.<br>6. ಸರ್ಕಾರಿ ಜಮೀನು ಅಕ್ರಮ ಒತ್ತುವರಿ ತೆರವುಗೊಳಿಸುವುದು.<br>7. ಜಾತಿ/ಆದಾಯ ಪ್ರಮಾಣ ಪತ್ರವನ್ನು ಆನ್‌ಲೈನ್ ಮೂಲಕ ಪಡೆಯುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.<br>8. ಮತದಾರರ ಪಟ್ಟಿ ಪರಿಷ್ಕರಣೆ ಕುರಿತಂತೆ ಕ್ರಮ ವಹಿಸುವುದು.<br>9. ಬರ/ಪ್ರವಾಹ ಇದ್ದಲ್ಲಿ ಪರಿಹಾರ ನೀಡುವ ಬಗ್ಗೆ ಕ್ರಮ ವಹಿಸುವುದು.<br>10. ಸರ್ಕಾರದಿಂದ ಸಾರ್ವಜನಿಕರಿಗೆ ದೊರೆಯಬಹುದಾದ ಸವಲತ್ತುಗಳ ಬಗ್ಗೆ ಅರಿವು ಮೂಡಿಸುವುದು.<br>11. ಹದ್ದು ಬಸ್ತು, ಪೋಡಿ ಮುಕ್ತಗ್ರಾಮ, ದರಕಾಸ್ತು ಪೋಡಿ (ನಮೂನೆ 1-5 ಮತ್ತು ನಮೂನೆ 6-10 ನ್ನು ಭರ್ತಿ ಮಾಡಿ ದರಕಾಸ್ತು ಪೋಡಿ ಮಾಡುವುದು)<br>12. ಗುಡಿಸಲು ರಹಿತ ವಾಸದ ಮನೆಗಳ ನಿರ್ಮಾಣದ ಬಗ್ಗೆ ಪರಿಶೀಲಿಸುವುದು.<br><br>ಒಟ್ಟಿನಲ್ಲಿ, ಗ್ರಾಮದಲ್ಲಿ ಜನ ಸಾಮಾನ್ಯರ ವಿವಿಧ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. |
| ಆ) | ಸದರಿ ಕಾರ್ಯಕ್ರಮದ ಅಡಿಯಲ್ಲಿ ಯಾವ ಯಾವ ಜಿಲ್ಲಾಧಿಕಾರಿಗಳು ಎಷ್ಟು ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ; (ಪ್ರತಿಯೊಂದು ಕಾರ್ಯಕ್ರಮದ ವಿವರ ನೀಡುವುದು) | ಎಲ್ಲಾ ಜಿಲ್ಲಾಧಿಕಾರಿಗಳು ದಿನಾಂಕ:20-02-2021, 20-03-2021, 16-10-2021 ಹಾಗೂ 19-02-2022 ರಂದು ಸದರಿ ಕಾರ್ಯಕ್ರಮವನ್ನು ಜರುಗಿಸಿರುತ್ತಾರೆ.<br><br>ಕೆಲವೊಂದು ಸಂದರ್ಭದಲ್ಲಿ ಗಣ್ಯ/ಅತಿಗಣ್ಯ ವ್ಯಕ್ತಿಗಳ ಭೇಟಿ ಅವಧಿಯಲ್ಲಿ ಕೆಲವು ಜಿಲ್ಲೆಗಳು ನಿಗಧಿಯಾದ ದಿನದಂದು ಕಾರ್ಯಕ್ರಮವನ್ನು ಜರುಗಿಸಲು ಸಾಧ್ಯವಾಗದೇ, ಬೇರೆ ದಿನಾಂಕಗಳಲ್ಲಿ ಕಾರ್ಯಕ್ರಮವನ್ನು ಜರುಗಿಸಲಾಗಿರುತ್ತದೆ. ಕೋವಿಡ್-19ರ ಸಾಂಕ್ರಾಮಿಕ ಹರಡುವಿಕೆಯಿಂದ ಏಪ್ರಿಲ್ ಮಾಹೆಯಿಂದ ಸೆಪ್ಟಂಬರ್ ಮಾಹೆವರೆಗೆ ಕಾರ್ಯಕ್ರಮ |

| | | |
|---|---|---|
| | | ಜರುಗಿರುವುದಿಲ್ಲ ಹಾಗೂ ಚುನಾವಣಾ ನೀತಿ ಸಂಹಿತೆಯು ರಾಜ್ಯದಲ್ಲಿ ಜಾರಿಯಾದ ಹಿನ್ನಲೆಯಲ್ಲಿ ದಿನಾಂಕ:20-11-2021ರಂದು ನಿಗಧಿಯಾಗಿದ್ದ ಕಾರ್ಯಕ್ರಮವನ್ನು ಮುಂದೂಡಲಾಗಿದೆ. |
| ಇ) | ಈ ಕಾರ್ಯಕ್ರಮಗಳು ನಡೆದ ಹಳ್ಳಿಗಳಲ್ಲಿ ಕಾರ್ಯಕ್ರಮದ ನಂತರ ಆದ ಬದಲಾವಣೆಗಳೇನು; | ಜಿಲ್ಲಾಧಿಕಾರಿಗಳು ಭೇಟಿ ನೀಡಿದ ತಾಲ್ಲೂಕು ವ್ಯಾಪ್ತಿಯ/ ಗ್ರಾಮವ್ಯಾಪ್ತಿಯಲ್ಲಿನ ವಿವಿಧ ಇಲಾಖೆಗಳ ಅಧಿಕಾರಿಗಳ ಭಾಗವಹಿಸುವಿಕೆಯಿಂದ ರೈತರ ಹಲವು ಸಮಸ್ಯೆಗಳಾದ ಪೌತಿ ಖಾತೆ, ಆರ್.ಟಿ.ಸಿ. ತಿದ್ದುಪಡಿ, ದಾರಿ ಸಮಸ್ಯೆ, ಮಾಶಾಸನ ಮಂಜೂರಾತಿ ಇತ್ಯಾದಿ ಗ್ರಾಮ ಮಟ್ಟದ ಹಲವಾರು ಸಮಸ್ಯೆಗಳಿಗೆ ತಕ್ಷಣದಲ್ಲೇ ಪರಿಹಾರ ನೀಡಲು ಸಾಧ್ಯವಾಗುತ್ತದೆ. ಇದರಿಂದಾಗಿ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ತಿಳುವಳಿಕೆ/ ಮಾಹಿತಿ ದೊರೆಯುವುದಲ್ಲದೆ ದೀರ್ಘಕಾಲದ ಹಲವಾರು ಸಮಸ್ಯೆಗಳು ಬಗೆಹರಿಯುತ್ತವೆ. ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ವಿನಾಃ ಕಾರಣ ವಿವಿಧ ಇಲಾಖೆಗಳಿಗೆ ಅಲೆದಾಡುವುದನ್ನು ತಪ್ಪಿಸಿದಂತಾಗುತ್ತದೆ ಹಾಗೂ ಮಧ್ಯವರ್ತಿಗಳ ಹಾವಳಿಯನ್ನು ಕಡಿಮೆ ಮಾಡಿದಂತಾಗುತ್ತದೆ. |
| ಈ) | ಈ ಕಾರ್ಯಕ್ರಮಗಳಿಗೆ ವೆಚ್ಚವಾದ ಹಣವೆಷ್ಟು; ಈ ವೆಚ್ಚವನ್ನು ಯಾವ ಯೋಜನೆಯಿಂದ ಬಳಕೆ ಮಾಡಲಾಗುತ್ತಿದೆ? (ಪ್ರತಿಯೊಂದು ಕಾರ್ಯಕ್ರಮದ ಸಂಪೂರ್ಣ ವೆಚ್ಚದ, ವಿವರಗಳನ್ನು ಕಾರ್ಯಕ್ರಮವಾರು ನೀಡುವುದು) | ಸದರಿ ಕಾರ್ಯಕ್ರಮಕ್ಕೆ ನಿರ್ದಿಷ್ಟವಾಗಿ ಅನುದಾನ ನೀಡಿರುವುದಿಲ್ಲ. ಪ್ರಸ್ತುತ ಜಿಲ್ಲಾಡಳಿತಕ್ಕೆ ಒದಗಿಸಲಾಗಿರುವ ಅನುದಾನದಿಂದ ವೆಚ್ಚವನ್ನು ಭರಿಸಲಾಗುತ್ತಿದೆ. |

**ಸಂಖ್ಯೆ: ಕಂಇ 88 ಸಮಿತಿ 2022**

**(ಆರ್. ಅಶೋಕ)**
ಕಂದಾಯ ಸಚಿವರು